ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2015–16 ದಿನಾಂಕ: 25–11–2015

# ಪತ್ರಿಕಾ ಪ್ರಕಟಣೆ

## ವಿಧಾನ ಮಂಡಲದಲ್ಲಿ ಇಂದು

## ಕಾಡುಪ್ರಾಣಿಗಳ ಕುಡಿಯುವ ನೀರಿಗೆ ಸೂಕ್ತ ಕ್ರಮ

ಬೆಂಗಳೂರು, ನವೆಂಬರ್ 25 (ಕರ್ನಾಟಕ ವಾರ್ತೆ)

ವನ್ಯಜೀವಿ ಪ್ರದೇಶಗಳಲ್ಲಿ ಕಾಡುಪ್ರಾಣಿಗಳ ನೀರಿನ ಅವಶ್ಯಕತೆಯನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ಸ್ಥಳಗಳಲ್ಲಿ ಸಣ್ಣ ಪುಟ್ಟ ಕೆರೆ – ಕುಂಟೆಗಳನ್ನು ನಿರ್ಮಿಸಲಾಗಿದೆ ಎಂದು ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವ ಬಿ. ರಮಾನಾಥ ರೈ ತಿಳಿಸಿದ್ದಾರೆ.

ಇಂದು ಪ್ರಶ್ನೋತ್ತರ ವೇಳೆಯಲ್ಲಿ ಸಿ.ಹೆಚ್. ವಿಜಯಶಂಕರ ಅವರ ಪ್ರಶ್ನೆಗೆ ಉತ್ತರಿಸುತ್ತಾ ಅರಣ್ಯ ಇಲಾಖೆಯು ತನ್ನ ಸುಪರ್ದಿಯಲ್ಲಿರುವಂತಹ ಒಟ್ಟಾರೆ ಅರಣ್ಯ ಪ್ರದೇಶದಲ್ಲಿ ಕಳೆದ ಮೂರು ದಶಕಗಳಿಂದಲೂ ಅರಣ್ಯೀಕರಣ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಯಶ್ವಸಿಯಾಗಿ ನಿರ್ವಹಿಸುತ್ತಾ ಬಂದಿದೆ. ಮಣ್ಣು ಮತ್ತು ನೀರಿನ ಸಂರಕ್ಷಣೆಯ ಅಂಗವು ಅರಣ್ಯೀಕರಣ ಕಾರ್ಯಕ್ರಮದಲ್ಲಿ ಸಂಪೂರ್ಣವಾಗಿ ಅಡಕಗೊಂಡಿರುತ್ತದೆ ಎಂದು ಸದನಕ್ಕೆ ತಿಳಿಸಿದರು.

ಒಂದು ಸ್ಥಳದಲ್ಲಿ ಅರಣ್ಯೀಕರಣ ಕಾಮಗಾರಿಗೆ ವೆಚ್ಚಮಾಡುವ ನಿರ್ಧಿಷ್ಟ ಮೊತ್ತದ ಸರಾಸರಿ ಶೇ 15 ಭಾಗದಷ್ಟು ಮೊತ್ತವನ್ನು ಮಣ್ಣು ಮತ್ತು ನೀರು ಸಂರಕ್ಷಣೆಯ ಗುರಿಯನ್ನಿಟ್ಟುಕೊಂಡು ವಿನಿಯೋಗಿಸಲಾಗುತ್ತಿದೆ. ಈ ಕಾರ್ಯಕ್ರಮದಡಿ ಗಲ್ಲಿ ಚೆಕ್ಸ್, ನಾಲಾಬರ್ಿ, ಚೆಕ್‌ಡ್ಯಾಂ, ಪರ್ಕೋಲೇಷನ್ ಟ್ಯಾಂಕ್ ಇತ್ಯಾದಿಗಳನ್ನು ಒಂದು ಸ್ಥಳಕ್ಕೆ ನಿರ್ದಿಷ್ಟವಾಗಿ ಬೇಕಾದಂತಹ ತಾಂತ್ರಿಕ ಉಪಾಯಗಳನ್ನು ನಿರೂಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ ಎಂದು ಸದನದಲ್ಲಿ ವಿವರಿಸಿದರು.

ಪಲ್ಲವಿ:ಕೆಎನ್‌ವಿ:ಜಿಪಿಆರ್.

## ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಸರ್ಕಾರ ಸೂಕ್ತ ಕ್ರಮ

ಬೆಂಗಳೂರು, ನವೆಂಬರ್ 25 (ಕರ್ನಾಟಕ ವಾರ್ತೆ)

ಕರ್ನಾಟಕ ರಾಜ್ಯ ಸರ್ಕಾರವು ಬಾಲ ಕಾರ್ಮಿಕ ಪದ್ಧತಿಯನ್ನು ನಿರ್ಮೂಲನೆ ಮಾಡಲು ಕಳೆದ ಎರಡು ವರ್ಷಗಳಲ್ಲಿ 48,849 ತಪಾಸಣೆಗಳನ್ನು ನಡೆಸಿ, 2,627 ಬಾಲ ಕಾರ್ಮಿಕರನ್ನು ಪತ್ತೆಹಚ್ಚಿ ಪುನರ್ವಸತಿ ಕಲ್ಪಿಸಲಾಗಿರುತ್ತದೆ ಎಂದು ಕಾರ್ಮಿಕ ರಾಜ್ಯ ಸಚಿವ ಪಿ.ಟಿ. ಪರಮೇಶ್ವರ ನಾಯ್ಕ್ ಅವರು ತಿಳಿಸಿದ್ದಾರೆ.

ಪತ್ತೆ ಹಚ್ಚಲಾದ ಬಾಲ ಕಾರ್ಮಿಕರ ಪುನರ್ವಸತಿಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕ್ರಮವಾಗಿ ರಾಷ್ಟ್ರೀಯ ಬಾಲ ಕಾರ್ಮಿಕ ಯೋಜನೆ (ಎನ್‌ಸಿಎಲ್ ಮತ್ತು ರಾಜ್ಯ ಬಾಲ ಕಾರ್ಮಿಕರ ಯೋಜನೆ (ಎಸ್.ಸಿ.ಎಲ್‌ಪಿ) ಗಳನ್ನು ಸಹ ಜಾರಿಗೆ ತಂದು ಬಾಲ ಕಾರ್ಮಿಕರನ್ನು ಪುನರ್ವಸತಿ ಮಾಡಲಾಗುತ್ತಿದೆ ಎಂದು ವಿಧಾನ ಪರಿಷತ್ ಸದಸ್ಯ ರಾಂಚಂದ್ರಗೌಡ ಅವರ ಲಿಖಿತ ಪ್ರಶ್ನೆಗೆ ಉತ್ತರಿಸುತ್ತಾ ಸದನಕ್ಕೆ ಮಾಹಿತಿ ನೀಡಿದರು.

ಪಲ್ಲವಿ:ಕೆಎನ್‌ವಿ:ಜಿಪಿಆರ್.

## ಸಾರ್ವಜನಿಕ ರಜಾ ದಿನ: ಬೆಳ್ಳಿ ಸಿನಿಮಾ-ಬೆಳ್ಳಿ ಮಾತು ಇಲ್ಲ

ಬೆಂಗಳೂರು, ನವೆಂಬರ್ 25 (ಕರ್ನಾಟಕ ವಾರ್ತೆ)

ಕರ್ನಾಟಕ ಚಲನಚಿತ್ರ ಅಕಾಡೆಮಿಯು ಪ್ರತಿ ಶನಿವಾರಗಳಂದು ಸಂಜೆ 4-00 ಗಂಟೆಗೆ ಏರ್ಪಡಿಸುತ್ತಿದ್ದ ಬೆಳ್ಳಿ ಸಿನಿಮಾ-ಬೆಳ್ಳಿ ಮಾತು ಕಾರ್ಯಕ್ರಮವು ನವೆಂಬರ್ 28 ರಂದು ಬರುವ ಶನಿವಾರದಂದು ಸಾರ್ವಜನಿಕ ರಜಾ ದಿನವಾಗಿರುವ ಹಿನ್ನೆಲೆಯಲ್ಲಿ ಪ್ರದರ್ಶನ ಇರುವುದಿಲ್ಲ ಎಂದು ಕರ್ನಾಟಕ ಚಲನಚಿತ್ರ ಅಕಾಡೆಮಿಯ ರಿಜಿಸ್ಟ್ರಾರ್ ಹೆಚ್.ಬಿ. ದಿನೇಶ್ ತಿಳಿಸಿದ್ದಾರೆ.

ಬೆಳ್ಳಿ ಸಿನಿಮಾ- ಬೆಳ್ಳಿ ಮಾತು ಕಾರ್ಯಕ್ರಮಗಳು ಶನಿವಾರ ಸಾರ್ವಜನಿಕ ರಜಾದಿನವಾದರೆ ಆ ದಿನಗಳಂದು ಬೆಳ್ಳಿ ಸಿನಿಮಾ ಬೆಳ್ಳಿ ಮಾತು ಕಾರ್ಯಕ್ರಮಗಳು ಇರುವುದಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಹೆಚ್‌ಬಿಡಿ/ ಬಾಬು/ಕೆಎಂ

## ಸಾರಿಗೆ ವಾಹನಗಳಿಗೆ ಸ್ಪೀಡ್ ಗವರ್ನರ್ ಅಳವಡಿಕೆ ಕಡ್ಡಾಯ

ಬೆಂಗಳೂರು, ನವೆಂಬರ್ 25 (ಕರ್ನಾಟಕ ವಾರ್ತೆ)

ರಾಜ್ಯದಲ್ಲಿ ಸಾರಿಗೆ ವಾಹನಗಳಿಗೆ ವೇಗ ನಿಯಂತ್ರಕ ಉಪಕರಣ (ಸ್ಪೀಡ್ ಗೌರ್‍ನರ್) ಅಳವಡಿಕೆಯನ್ನು ಕಡ್ಡಾಯಗೊಳಿಸಲಾಗಿದ್ದು, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು WP No.41890/ 2015 (PIL) ಪ್ರಕರಣದಲ್ಲಿ ದಿನಾಂಕ:14-10-2015 ರಂದು 'ಹಳೆಯ ಸಾರಿಗೆ ವಾಹನಗಳಿಗೆ ಸ್ಪೀಡ್ ಗೌರ್‍ನರ್ ಅಳವಡಿಸದೇ ಇದ್ದಲ್ಲಿ ಅಂತಹ ವಾಹನಗಳ ಅರ್ಹತಾ ಪತ್ರ ನವೀಕರಿಸಬಾರದೆಂದು ಆದೇಶ ನೀಡಿರುತ್ತದೆ.

ಆದರೆ, ಈ ಕುರಿತಂತೆ, ಅಧ್ಯಕ್ಷರು, ಫೆಡರೇಷನ್ ಆಫ್ ಕರ್ನಾಟಕ ಸ್ಟೇಟ್ ಲಾರಿ ಓನರ್ಸ್ ಅಂಡ್ ಏಜೆಂಟ್ಸ್ ಅಸೋಸಿಯೇಷನ್ (ರಿ), ಬೆಂಗಳೂರು- ಇವರು, ಸ್ಪೀಡ್ ಗೌರ್ನರ್ ಅಳವಡಿಕೆ ಕಡ್ಡಾಯಗೊಳಿಸಿರುವುದನ್ನು ವಿರೋಧಿಸಿ ದಿನಾಂಕ:01-12-2015ರಿಂದ ಅನಿರ್ದಿಷ್ಟ ಕಾಲದವರೆಗೆ ಖಾಸಗಿ ಬಸ್ಸುಗಳೂ ಸೇರಿದಂತೆ ಎಲ್ಲಾ ವಾಣಿಜ್ಯ ವಾಹನಗಳನ್ನು ಸ್ಥಗಿತಗೊಳಿಸಲು ರಾಜ್ಯದ ಎಲ್ಲಾ ಸಂಘಟನೆಗಳು ನಿರ್ಣಯಿಸಿರುವುದಾಗಿ ದಿನಾಂಕ:20-11-2015ರಂದು ಪತ್ರಿಕಾ ಹೇಳಿಕೆ ನೀಡಿರುತ್ತಾರೆ.

ಹಲವು ವರ್ಗದ ಸಾರಿಗೆ ವಾಹನಗಳಿಗೆ ಸ್ಪೀಡ್ ಗೌರ್ನರ್‌ಅನ್ನು ಕಡ್ಡಾಯವಾಗಿ ಅಳವಡಿಸುವ ಕುರಿತು ಕೇಂದ್ರ ಮೋಟಾರು ವಾಹನ ನಿಯಮಾವಳಿ 1989ರ ನಿಯಮ 118ಕ್ಕೆ ತಿದ್ದುಪಡಿ ಮಾಡಿ ಕೇಂದ್ರ ಸರ್ಕಾರವು ಹೊರಡಿಸಿರುವ ಅಂತಿಮ ಅಧಿಸೂಚನೆ ಸಂಖ್ಯೆ.G.S.R.290(ಇ) ದಿನಾಂಕ:15-04-2015ರ ಪ್ರಕಾರ, **ದಿನಾಂಕ:1-10-2015ರಂದು ಅಥವಾ ನಂತರದ ದಿನಾಂಕದಲ್ಲಿ ತಯಾರಿಸಲ್ಪಟ್ಟ ಪ್ರತಿಯೊಂದು ಸಾರಿಗೆ ವರ್ಗದ ವಾಹನಕ್ಕೆ ತಯಾರಿಕೆ ಹಂತದಲ್ಲಿ ಅಥವಾ ಡೀಲರ್‌ಶಿಪ್ ಹಂತದಲ್ಲಿ ಪ್ರತಿ ಘಂಟೆಗೆ ಗರಿಷ್ಠ 80 ಕಿ.ಮೀ. ವೇಗಮಿತಿಗೆ ಒಳಪಡುವಂತಹ ಮತ್ತು ಕಾಲಕಾಲಕ್ಕೆ ತಿದ್ದುಪಡಿಯಾಗುವ AIS: 018/2001ರ ಮಾಪನಗಳುಳ್ಳ ವೇಗ ನಿಯಂತ್ರಕ ಉಪಕರಣ ಅಥವಾ ಸ್ಪೀಡ್ ಗೌರ್ನರ್‌ಅನ್ನು ಅಳವಡಿಸಿರತಕ್ಕದ್ದು.**

ಅಲ್ಲದೆ, ಅಪಾಯಕಾರಿ ಸರಕು ಸಾಗಣೆ ಮಾಡುವ ಸಾರಿಗೆ ವಾಹನಗಳು, ಟ್ಯಾಂಕರ್ಸ್, ಡಂಪರ್ಸ್ ಮತ್ತು ಶಾಲಾ ವಾಹನಗಳಿಗೆ ಪ್ರತಿ ಘಂಟೆಗೆ ಗರಿಷ್ಠ 60 ಕಿ.ಮೀ. ವೇಗಮಿತಿಗೆ ಒಳಪಡುವಂತೆ ಸ್ಪೀಡ್ ಗೌರ್ನರ್‌ಅನ್ನು ಅಳವಡಿಸಿರತಕ್ಕದ್ದು ಎಂದು ಆದೇಶಿಸಲಾಗಿರುತ್ತದೆ.

ಕೇಂದ್ರ ಸರ್ಕಾರವು ಮೇಲ್ಕಂಡ ಅಧಿಸೂಚನೆಯಲ್ಲಿ ರಾಜ್ಯ ಸರ್ಕಾರಗಳಿಗೆ ನೀಡಿದ ನಿರ್ದೇಶನದ ಮೇರೆಗೆ, ಕರ್ನಾಟಕ ಸರ್ಕಾರವು ಅಧಿಸೂಚನೆ ಸಂ.ಸಾರಿಇ 107 ಸಾಇಸೇ 2014, ದಿನಾಂಕ:11-8-2015ನ್ನು ಹೊರಡಿಸಿದ್ದು, **ದಿನಾಂಕ:1-10-2015ಕ್ಕಿಂತ ಮುಂಚಿತವಾಗಿ ನೋಂದಣಿ ಯಾಗಿರುವ ಮತ್ತು ಸ್ಪೀಡ್ ಗೌರ್ನರ್ ಅಳವಡಿಸದೇ ಇರುವ ಮತ್ತು ಅಧಿಸೂಚನೆಯಲ್ಲಿ ನಿಗದಿಪಡಿಸಿದ ಸಾರಿಗೆ ವರ್ಗದ ವಾಹನಗಳಿಗೆ ಅಂತಹ ವಾಹನ ಮಾಲೀಕರು ದಿನಾಂಕ:1-4-2016ರ ಒಳಗಾಗಿ** ಪ್ರತಿ ಘಂಟೆಗೆ ಗರಿಷ್ಠ 80 ಕಿ.ಮೀ. ವೇಗಮಿತಿಗೆ ಒಳಪಡುವಂತಹ ಮತ್ತು AIS:018/2001 ರ ಮಾಪನಗಳುಳ್ಳ ವೇಗ ನಿಯಂತ್ರಕ ಉಪಕರಣ ಅಥವಾ ಸ್ಪೀಡ್ ಗೌರ್ನರ್‌ಅನ್ನು ಅಳವಡಿಸಿರತಕ್ಕದ್ದೆಂದು ಅಧಿಸೂಚಿಸಲಾಗಿರುತ್ತದೆ.

ಅದರಂತೆ ಸರ್ಕಾರದ ನಿರ್ದೇಶನದ ಮೇರೆಗೆ ರಾಜ್ಯದಲ್ಲಿ ಸಾರಿಗೆ ವಾಹನಗಳಿಗೆ ಸ್ಪೀಡ್ ಗೌರ್ನರ್ ಅಳವಡಿಕೆ ಕಾರ್ಯ ನಿರ್ವಹಿಸಲು ಸರ್ಕಾರದಿಂದ /ಸಾರಿಗೆ ಇಲಾಖೆಯಿಂದ ನಿಗದಿಪಡಿಸಿದ ನಿಬಂಧನೆಗಳನ್ನು ಪೂರೈಸಿದ **ಎರಡು ಸ್ಪೀಡ್ ಗೌರ್ನರ್ ತಯಾರಿಕಾ ಕಂಪೆನಿಗಳಾದ ಮೆ: ರೋಸ್‌ಮಾರ್ಟ ಆಟೋಟೆಕ್ ಲಿಮಿಟೆಡ್ ಮತ್ತು ಮೆ: ಪ್ರಿಕಾಲ ಲಿಮಿಟೆಡ್** ಎಂಬ ಸಂಸ್ಥೆಗಳಿಗೆ ಅನುಮತಿಯನ್ನು ನೀಡಲಾಗಿರುತ್ತದೆ ಮತ್ತು ಅದರಂತೆ ಸದರಿ ಸಂಸ್ಥೆಗಳು ಸ್ಪೀಡ್ ಗೌರ್ನರ್ ಅಳವಡಿಕೆ ಕಾರ್ಯವನ್ನು ನಿರ್ವಹಿಸುತ್ತಲಿವೆ.

ಆದ್ದರಿಂದ, ಮಾನ್ಯ ಉಚ್ಛ ನ್ಯಾಯಾಲಯದ ಆದೇಶದ ಮೇರೆಗೆ, ಅರ್ಹತಾ ಪತ್ರ ನವೀಕರಣಕ್ಕೆ ಹಾಜರುಪಡಿಸುವ ಈಗಾಗಲೇ ನೋಂದಾಯಿತವಾದ ಎಲ್ಲಾ ಸಾರಿಗೆ ವಾಹನಗಳಿಗೆ ಸ್ಪೀಡ್ ಗೌರ್ನರ್‌ಅನ್ನು ಕಡ್ಡಾಯವಾಗಿ ಅಳವಡಿಸುವಂತೆ ತಿಳಿಸಿದೆ, ಒಂದು ವೇಳೆ ಸ್ಪೀಡ್ ಗೌರ್ನರ್ ಅಳವಡಿಸದೇ ಇದ್ದಲ್ಲಿ ಮಾನ್ಯ ನ್ಯಾಯಾಲಯದ ಆದೇಶದ ಉಲ್ಲಂಘನೆಯಾಗುತ್ತದೆ ಎಂದು ಸಾರಿಗೆ ಮತ್ತು ರಸ್ತೆ ಸುರಕ್ಷತೆ, ಆಯುಕ್ತರು, ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

ಪಲ್ಲವಿ